3) ಅಲ್ಲದೆ ಕಿಮೀ.29.00 ರಿಂದ 30.00 ವರೆಗೆ 935 ಮೀಟರ್ ಉದ್ದಕ್ಕೆ ರಸ್ತೆ ಅಗಲ ಹಾಗೂ 5.50 ಮೀಟರ್‌ಗೆ ಡಾಂಬರೀಕರಣ ಮಾಡಲು ರೂ.10.00 ಲಕ್ಷ ವೆಚ್ಚದಲ್ಲಿ 2005–06ನೇ ಅಪೆಂಡಿಕ್ಸ್–ಇ 5054 ಯೋಜನೆಯಡಿಯಲ್ಲಿ ಕೆಲಸ ಪ್ರಾರಂಭಿಸಿದೆ.

4) ಸದರಿ ರಸ್ತೆಯ ಕಿಮೀ.0.00 ರಿಂದ 32.80 ವರೆಗೆ ಗುಂಡಿಗಳನ್ನು ಮುಚ್ಚಿ ವಾಹನ ಸಂಚಾರಕ್ಕೆ ಯೋಗ್ಯವಾಗಿ ಇಡಲಾಗಿದೆ.

ಉಪ್ಪಿನಂಗಡಿ ಕಡಬ ಸುಬ್ರಹ್ಮಣ್ಯ ರಸ್ತೆಯನ್ನು 08–03–2006ರಲ್ಲಿ ರಾಜ್ಯ ಹೆದ್ದಾರಿಯಾಗಿ ಮೇಲ್ದರ್ಜೆಗೇರಿಸಿದ್ದರಿಂದ ಹಾಗೂ ಮಂಗಳೂರು ವಿಭಾಗದ ರಾಜ್ಯ ಹೆದ್ದಾರಿ ನಿರ್ವಹಣೆಯ ಕಾಮಗಾರಿಗಳನ್ನು ದಿನಾಂಕ 16–9–2005 ರಲ್ಲಿ ಪ್ರಾರಂಭಿಸಿದ್ದ ಕಾರಣ ಇದನ್ನು ರಾಜ್ಯ ಹೆದ್ದಾರಿಯ ಮೂರು ವರ್ಷಗಳ ನಿರ್ವಹಣೆಯ ಅಡಿಯಲ್ಲಿ ತೆಗೆದುಕೊಳ್ಳಲಾಗಿರುವುದಿಲ್ಲ. ಆದರೆ, ಸುಬ್ರಹ್ಮಣ್ಯ ಉಡುಪಿ ರಾಜ್ಯ ಹೆದ್ದಾರಿಯ 82.40 ಕಿಮೀ. ಉದ್ದದ ರಸ್ತೆಯನ್ನು ರೂ.145.00 ಲಕ್ಷಗಳ ಅಂದಾಜು ಮೊತ್ತದಲ್ಲಿ (2005–08) ಮೂರು ವರ್ಷದ ರಾಜ್ಯ ಹೆದ್ದಾರಿ ನಿರ್ವಹಣೆಯ ಯೋಜನೆಯು ಮಂಗಳೂರು ವಿಭಾಗದ ಪ್ಯಾಕೇಜಿನಲ್ಲಿ ನಿರ್ವಹಣೆಗಾಗಿ ತೆಗೆದುಕೊಂಡಿದ್ದು ಕಾಮಗಾರಿಗಳು ಪ್ರಗತಿಯಲ್ಲಿವೆ.

5. ಕೆ.ಹೆಚ್.ಡಿ.ಸಿ ನೌಕರರಿಗೆ ಅನಿಯಮಿತ ನೂಲು ಪೂರೈಕೆ.

288 (1538) ಶ್ರೀ ಸಿದ್ದುಸಾವದಿ (ಜಮಖಂಡಿ): ಮಾನ್ಯ ಪ್ರವಾಸೋದ್ಯಮ, ಜವಳಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ವರ್ಷದ ಆಯವ್ಯಯದಲ್ಲಿ ಕೈಮಗ್ಗ ಅಭಿವೃದ್ಧಿ ನಿಗಮದಡಿಯಲ್ಲಿ ನೇಯ್ಗೆ ಮಾಡುವ ನೇಕಾರರಿಗೆ ಯಾವ ಯಾವ ರೀತಿ ಸೌಲಭ್ಯಗಳು ದೊರೆತಿವೆ (ಸಂಪೂರ್ಣ ವಿವರ ಒದಗಿಸುವುದು);

ಆ) ಸದರಿ ನೇಕಾರರಿಗೆ ಉದ್ಯೋಗದ ಭರವಸೆ ಇದೆಯೇ (ವಿವರ ಒದಗಿಸುವುದು) :

ಇ) ಹಾಗಿದ್ದರೂ ಕೆ.ಹೆಚ್.ಡಿ.ಸಿ. ನೇಕಾರರಿಗೆ ಕಚ್ಚಾ ಮಾಲಿನ ನೂಲಿನ) ಕೊರತೆ ಬೀಳಲು ಕಾರಣ; ಒಂದರಿಂದ ಎರಡು ತಿಂಗಳುಗಳವರೆಗೆ ಅವರಿಗೆ ನೂಲು ಪೂರೈಕೆ ಆಗದೇ ಉದ್ಯೋಗ ನಿಂತು ಉಪವಾಸ ಬೀಳುವ ಸ್ಥಿತಿ ಇದ್ದದ್ದು ಸರಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಕೈಗೊಂಡ ಕ್ರಮಗಳೇನು;

ಉ) ಕೆ.ಹೆಚ್.ಡಿ.ಸಿ.ಯು ಈಗಿನ ಹಣಕಾಸಿನ ಸ್ಥಿತಿಗತಿಯ ಬಗ್ಗೆ ಸಂಪೂರ್ಣ ವಿವರ ಒದಗಿಸುವುದು;

ಊ) ಸದರಿ ನೇಕಾರರ ಗೃಹಸಾಲ ಮನ್ನಾ ಮಾಡಲಾಗಿದೆಯೇ: ಇದನ್ನುಳಿದು ಸರ್ಕಾರದಿಂದ ಅವರ ಕುಟುಂಬಗಳಿಗೆ ದೊರೆಯುವ ಸೌಲಭ್ಯಗಳಾವುವು?

ಶ್ರೀ ಬಿ. ಶ್ರೀರಾಮುಲು (ಪ್ರವಾಸೋದ್ಯಮ ಜವಳಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) 1) 2006–07ನೇ ಸಾಲಿನ ಆಯವ್ಯಯದಲ್ಲಿ ಅಗ್ಗದರದ ಸೀರೆ ಪಂಚೆ ಯೋಜನೆಯಡಿ ರೂ.2.00 ಕೋಟಿಗಳ ಅನುದಾನವನ್ನು ಸರ್ಕಾರವು ಒದಗಿಸಿದೆ. ಈ ಮೊತ್ತದಿಂದ

ಸುಮಾರು 3.15 ಲಕ್ಷ ಸೀರೆ–ಪಂಚೆಗಳನ್ನು ಉತ್ಪಾದಿಸಬಹುದು. ಇದರಿಂದ ಸುಮಾರು 3,000 ವಯೋವೃದ್ಧ ಮತ್ತು ಮಹಿಳಾ ಕೈಮಗ್ಗ ನೇಕಾರರಿಗೆ ಉದ್ಯೋಗ ದೊರಕುವುದು.

2) 2007–08ನೇ ಸಾಲಿಗೆ ವಿದ್ಯಾ ವಿಕಾಸ ಯೋಜನೆಯಡಿ ಸುಮಾರು ರೂ.40.00 ಕೋಟಿ ಮೌಲ್ಯದ ಶಾಲಾ ವಿದ್ಯಾರ್ಥಿಗಳ ಸಮವಸ್ತ್ರ ಸರಬರಾಜು ಮಾಡುವ ಆದೇಶ ನಿಗಮಕ್ಕೆ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ದೊರೆಯುವ ಭರವಸೆ ಇದೆ. ಇದರಿಂದ ಸುಮಾರು ನಿಗಮದಡಿ ನೇಯ್ಗೆ ಮಾಡುವ 10,000 ಕೈಮಗ್ಗ ನೇಕಾರರು ವೃತ್ತಿಯನ್ನು ಮುಂದುವರೆಸಬಹುದು.

ಆ) 1. ನಿಗಮದಡಿ ನೇಯ್ಗೆ ಮಾಡುತ್ತಿರುವ ಕೈಮಗ್ಗ ನೇಕಾರರಿಗೆ ನಿರಂತರ ನೇಯ್ಗೆ ಉದ್ಯೋಗದ ಭರವಸೆ ಇದೆ.

2. 2006–07ನೇ ಸಾಲಿನ ಅಗ್ಗ ದರದ ಸೀರೆ ಪಂಚೆ ಯೋಜನೆಯಡಿ ಸುಮಾರು 3,000 ವಯೋವೃದ್ಧ ಮತ್ತು ಮಹಿಳಾ ಕೈಮಗ್ಗ ನೇಕಾರರನ್ನು ಅವಶ್ಯವಿರುವ ಬಟ್ಟೆ ಉತ್ಪಾದನೆಗಾಗಿ ತೊಡಗಿಸಲಾಗುವುದು.

3. ವಿದ್ಯಾ ವಿಕಾಸ ಯೋಜನೆಯಡಿ ಸರಬರಾಜು ಮಾಡುವ ಶಾಲಾ ಸಮವಸ್ತ್ರಗಳಿಗೆ ಬೇಕಾಗುವ ಬಟ್ಟೆ ಉತ್ಪಾದನೆಗಾಗಿ ಸುಮಾರು 10,000 ಕೈಮಗ್ಗ ನೇಕಾರರನ್ನು ತೊಡಗಿಸಲಾಗುವುದು.

ಆ) 2006–07ನೇ ಸಾಲಿನ ವಿದ್ಯಾ ವಿಕಾಸ ಯೋಜನೆಯಡಿ ಬಾಕಿ ರೂ.38.16 ಕೋಟಿ ಹಣ ನಿಗದಿತ ವೇಳೆಯಲ್ಲಿ ನಿಗಮಕ್ಕೆ ಪಾವತಿಯಾಗದ ಕಾರಣ, ಕೆ.ಹೆಚ್.ಡಿ.ಸಿ. ಖರೀದಿಸಿದ ನೂಲು, ಬಣ್ಣ ಮತ್ತು ರಾಸಾಯನಿಕ ವಸ್ತುಗಳ ಸರಬರಾಜುದಾರರಿಗೆ ಹಣ ಪಾವತಿಸಲಾಗಲಿಲ್ಲ. ಆದುದರಿಂದ ಈ ವಿಷಯ ಇತ್ಯರ್ಥವಾಗುವವರೆಗೆ ನೇಕಾರರಿಗೆ ನಿರಂತರವಾಗಿ ನೂಲು ಪೂರೈಸಲು ಕೆ.ಹೆಚ್.ಡಿ.ಸಿ.ಗೆ ಕಷ್ಟವಾಗಿದೆ.

ಇ) 1. ಅಗ್ಗದರದ ಸೀರೆ ಪಂಚೆ ಯೋಜನೆಯಡಿ 2006–07ನೇ ಸಾಲಿನ ಆಯವ್ಯಯದಲ್ಲಿ ಹಂಚಿಕೆಯಾದ ಅನುದಾನ ರೂ.2.00 ಕೋಟಿಗಳನ್ನು ನಿಗಮಕ್ಕೆ ಬಿಡುಗಡೆ ಮಾಡುವ ಬಗ್ಗೆ ಪರಿಶೀಲನೆಯಲ್ಲಿದೆ.

2. 2006–07ನೇ ಸಾಲಿನ ವಿದ್ಯಾ ವಿಕಾಸ ಯೋಜನೆಯಡಿ ಬರಬೇಕಾದ ಬಾಕಿ ಉಳಿದ ಹಣವನ್ನು ರಾಜ್ಯ ವಲಯದಿಂದ ಬಿಡುಗಡೆ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

3. ಸಾರ್ವಜನಿಕ ಶಿಕ್ಷಣ ಇಲಾಖೆಯನ್ನು ವಿದ್ಯಾ ವಿಕಾಸ ಯೋಜನೆಯಡಿ 2007–08ನೇ ಸಾಲಿಗೆ ಅವಶ್ಯವಿರುವ ಶಾಲಾ ಸಮವಸ್ತ್ರಗಳಿಗೆ ಸರಬರಾಜು ಮಾಡಲು ಮುಂಗಡ ಆದೇಶ ಹಾಗೂ ಶೇಕಡ 50ರ ಮುಂಗಡ ಹಣ ನೀಡುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಊ) ಪ್ರಸ್ತುತ ನಿಗಮವು ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿದೆ. 2004–05ನೇ ಸಾಲಿಗೆ ನಿಗಮವು ರೂ.5.58 ಕೋಟಿಗಳ ನಷ್ಟವನ್ನು ಅನುಭವಿಸಿದೆ. 31ನೇ ಮಾರ್ಚ್ 2005ರ ಅಂತ್ಯಕ್ಕೆ ಕ್ರೂಢೀಕೃತ ನಷ್ಟ ರೂ.52.79 ಕೋಟಿಗಳು. ನಷ್ಟದಿಂದ ಹೊರಬರಲು ಸ್ವಯಂ ನಿವೃತ್ತಿ ಯೋಜನೆಯಡಿ 270 ಹೆಚ್ಚುವರಿ ಸಿಬ್ಬಂದಿಗೆ ಸ್ವಯಂ ನಿವೃತ್ತಿಯನ್ನು ನೀಡಲಾಗಿದೆ. ಇದರಿಂದ ನಿಗಮವು ಆಡಳಿತಾತ್ಮಕ ವೆಚ್ಚವನ್ನು ಕಡಿತಗೊಳಿಸಿದೆ.

ಋ) 1) ನಿಗಮದಡಿ ಕಾರ್ಯನಿರ್ವಹಿಸುತ್ತಿರುವ ಕೈಮಗ್ಗ ನೇಕಾರರಿಗೆ ಹಣಕಾಸು ಸಂಸ್ಥೆಗಳಿಂದ ಮಂಜೂರಾದ ಗೃಹ ಸಾಲವನ್ನು ಮನ್ನಾ ಮಾಡಲಾಗಿಲ್ಲ.

2) ನೇಕಾರರಿಗೆ ಈ ಕೆಳಕಂಡ ಯೋಜನೆಗಳಡಿ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.

(1) ಜೀವ ವಿಮೆ ಯೋಜನೆ

(2) ಆರೋಗ್ಯ ವಿಮೆ ಯೋಜನೆ

(3) ಮಿತವ್ಯಯನಿಧಿ ಯೋಜನೆ

(4) ನೇಕಾರರ ಕಲ್ಯಾಣ ಯೋಜನೆ

ಅ) ವೈದ್ಯಕೀಯ ವೆಚ್ಚ ಮರುಪಾವತಿ

ಆ) ಶಾಲಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ

ಇ) ಅಂತ್ಯ ಸಂಸ್ಕಾರ ವೆಚ್ಚ

3) ವಸತಿ ಮತ್ತು ಕಾರ್ಯಾಗಾರ ಯೋಜನೆ

ಹುಬ್ಬಳ್ಳಿ–ಧಾರವಾಡ ಸರ್ವಾಂಗೀಣ ಅಭಿವೃದ್ಧಿ

289 (1086) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ–ಧಾರವಾಡ ನಗರಗಳ ಸರ್ವಾಂಗೀಣ ಅಭಿವೃದ್ಧಿಪಡಿಸಲಿಕ್ಕೆ ಪಾಲಿಕೆಯ ಮತಿಯಿಂದ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆಯೇ;

ಆ) ಹುಬ್ಬಳ್ಳಿ–ಧಾರವಾಡ ಸರ್ವಾಂಗೀಣ ಅಭಿವೃದ್ಧಿಪಡಿಸಲಿಕ್ಕೆ ಸಿದ್ಧಪಡಿಸಿದ ಅಂದಾಜು ಮೊತ್ತವೆಷ್ಟು; ಅದರ ನೀಲಿನಕ್ಷೆ ಇಲ್ಲವೆ ಒಂದು ವಿಹಂಗಮ ನೋಟ ಸರ್ಕಾರದಲ್ಲಿದೆಯೇ;

ಇ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು; ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :

ಅ) ಸಮಗ್ರ ಅಭಿವೃದ್ಧಿ ಯೋಜನೆಯನ್ನು ಪಾಲಿಕೆಯು ಸಲ್ಲಿಸಿರುವುದಿಲ್ಲ. ಆದರೆ, ನಗರ ಮೂಲ ಸೌಕರ್ಯ ಸುಧಾರಣೆಗಾಗಿ ರೂ.42.00 ಕೋಟಿಗಳ ಪ್ರಸ್ತಾವನೆಯನ್ನು ಸಲ್ಲಿಸಿದೆ.

ಆ) ಸಮಗ್ರ ಅಭಿವೃದ್ಧಿ ಯೋಜನೆಯನ್ನು ಸಲ್ಲಿಸಿರುವುದಿಲ್ಲ.

ಇ) ಸರ್ಕಾರವು ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯು ಸಲ್ಲಿಸಿರುವ ರೂ.42.00 ಕೋಟಿಗಳ ಯೋಜನೆಯನ್ನು ಪರಿಶೀಲಿಸುತ್ತಿದೆ.